ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಿ ಅವರಿಂದ ಪಡದುಕೊಂಡಿರುವ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

(5.) ಚಡಸವಾಲ್‌ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟು ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಪ್ರಕಾರ ಡಿಪಾಜಿಟ್ ಹಾಜರ್ ಮಾಡಬೇಕು. ಬಾಕಿ ಮೊಬಲಗನ್ನು ರೂಪಾಯಿ 1ಕ್ಕೆ 1 ಆಣೆ ವೀರೆ ಲೋಕಲ್‌ಸೆಸ್ ಸಹಿತ ಹರಾಜು ಖಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರ್‌ರವರಿಂದ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಪಾವತಿ ಮಾಡಬೇಕು. ಡಿಪಾಜಿಟ್ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಪಾವತಿ ಮಾಡುವದಕ್ಕೂ ತಪ್ಪಿದರೆ ಈ ಬಾಬು ಪುನಹ ಹರಾಜು ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲ್ ಸವಾಲ್‌ದಾರನನ್ನ ಗುರಿಮಾಡಲ್ಪಡುತ್ತೆ.

(6.) ಇಜಾರೆದಾರನು ಹಿಡುವಳಿ ಜಮೀನಿನಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರರ ಅನುಮತಿ ವಿನಹ ಆರಿಸಿಕೊಳ್ಳಕೂಡದು ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರನಿಗೇ ವಿನಹ ಇತರರಿಗೆ ಮಾರುವದಕ್ಕೇ ಆಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

(7.) ಇಜಾರೆದಾರನು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆತಂಕ ಪಡಿಸಕೂಡದು.

(8.) ಹಿಡುವಳಿಯಲ್ಲಿ ಇಲ್ಲದ ಜಮೀನ್‌ಗಳನ್ನ ಸರಕಾರದವರು ದರಖಾಸ್ತುಗಳು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಯಿರುವದಿಲ್ಲ. ಮತ್ತು ಅಂಥಾ ಜಮೀನ್‌ಗಳಲ್ಲಿ ಕೆಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಯಿರುತ್ತೆ.

(9.) ಕಲ್ಲುಗಳನ್ನ ಜಮಾಯಿಸುವದಕ್ಕಾಗಲಿ ಜಮೀನ್‌ಗಳನ್ನ ಇಜಾರೆದಾರನು ಅಗಿಯಕೂಡದು. ಬಂದು ವೇಳೆ ಅಗದರೆ. ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

(10.) ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಪ್ಪುಮಣ ಕಲ್ಲು, ಮತ್ತು ಅದು ರಫ್ತಾಗುವ ಸ್ಥಳ ಈ ತಪ್ಸೀಲ್ ಕಂಡು ತಾಲ್ಲೂಕು ಅಮಲ್‌ದಾರ್ರಿಂದ ಒಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನ ಇಜಾರೆದಾರ್ರು ಸಾಗಿಸಕೂಡದು.

ವಿ. ಎನ್. ನರಸುಂಹಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಕೋಲಾರ ಡಿಸ್ಟ್ರಿಕ್ಟ್.

ಬಾಗೇಪಲ್ಲಿ ತಾಲ್ಲೂಕು ಕಚೇರಿಯಿಂದ.

ಇಸ್ತಿಹಾರ್‌ನಾಮೆ.

ತಾರೀಖು 18ನೇ ಆಗಸ್ಟ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೋಲಾರ ಡಿಸ್ಟ್ರಿಕ್ಟು ಬಾಗೇಪಲ್ಲಿ ತಾಲ್ಲೂಕು ಗ್ರಾಮಾಂತ್ರಗಳಲ್ಲಿ ಯಿರುವ ಕುರಂಗದಕಲ್ಲು 96—97ನೇ ದುರ್ಮುಖಿ ಸಂವತ್ಸರಕ್ಕೆ ದಾಖಲಾಗತಕ್ಕದ್ದನ್ನ 1896ನೇ ಇಸವಿ ಮಾಹೆ ನೇ ತಾರೀಖಿನಲ್ಲಿ ಹರಾಜು ಮಾಡಲ್ಪಡುತ್ತೆ.

2. ಈ ಹರಾಜು ತಾಲ್ಲೂಕು ಕಚೇರಿಯಲ್ಲಿ ದಿವಿ 11 ಘಂಟೆಗೆ ಅಮಲ್‌ದಾರ್ರವರು ಮಾಡಿಸುತ್ತಾರೆ.

3. ಇಜಾರೆಯು ಪ್ರತಿ ಸಾಲ್ ಜುಲೈ ಲಾಗಾಯತು ಒಂದು ವರ್ಷದ ವರೆಗೆ ಯಿರತಕ್ಕದ್ದು.

4. ಹರಾಜ್ ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ಮಾಡುತ್ತಾರೋ ಅಥವಾ ಯಿತರರಿಗೋಸ್ಕರ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಿ ಅವರಿಂದ ಪಡಕೊಂಡುಬರುವ ಅಧಿಕಾರಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಚಡಸವಾಲ್‌ದಾರನು ಹರಾಜುಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟು ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25ರೂ. ಪ್ರಕಾರ ಡಿಪಾಜಿಟ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನೂ ರೂಪಾಯಿ ಒಂದಕ್ಕೆ ಒಂದಾಣೆ ಪ್ರಕಾರ ಆಗುವ ಲೋಕಲ್ ಸೆಸ್ಸ್ ಸಹಿತ ಹರಾಜ್ ಕಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರ್ರವರಿಂದ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಪಾವತಿ ಮಾಡಬೇಕು. ಡಿಪಾಜಿಟ್ ಕಟ್ಟುವದಕ್ಕೂ ಅಥವಾ ಬಾಕಿ. ಮೊಬಲಗು ಪಾವತಿ ಮಾಡುವದಕ್ಕೂ ತಪ್ಪಿದರೆ ಈ ಬಾಬು ದುಸರಾ ಹರಾಜ್ ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲ್ ಸವಾಲ್‌ದಾರನನ್ನ ಗುರಿಮಾಡಲ್ಪಡುತ್ತೆ.

6. ಇಜಾರೆದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾಯ ಹಿಡುವಳಿದಾರನ ಅನುಮತಿ ವಿನಹ ಆರಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರರಿಗೇ ವಿನಹ ಇತರರಿಗೆ ಮಾರುವದಕ್ಕಾಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

7. ಇಜಾರೆದಾರನು ಹುಲ್ಲುಬನ್ನಿ ಯಾ ಹುಲ್ಲುಕಾವಲ್ ಇಜಾರೆದಾರರ ಹಕ್ಕಿಗೆ ಆಟಂಕ ಪಡಿಸಕೂಡದು.

8 ಹಿಡುವಳಿಯಲ್ಲಿ ಇಲ್ಲದ ಜವಿಾನುಗಳನ್ನ ಸರ್ಕಾರದವರು ದರಖಾಸ್ತು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಇರುವದಿಲ್ಲ. ಮತ್ತು ಅಂಥಾ ಜವಿಾನುಗಳಲ್ಲಿ ಶಿಕ್ಕುವ ಕುರಂಗಡ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಯಿರುವದಿಲ್ಲ

9. ಕಲ್ಲುಗಳನ್ನ ಜವಾಯಿಸುವದಕ್ಕಾಗಿ ಜವಿಾನುಗಳನ್ನ ಇಜಾರೆದಾರನು ಅಗಿಯಕೂಡದು. ಒಂದು ವೇಳೆ ಅಗದರೆ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಮಾಡಿಸಬೇಕು.

ಸಿ. ಮಾದಯ್ಯ,
ಡೆಪ್ಯೂಟಿ ಕಮ್ಮಿಷನರ್.

ತುಮಕೂರ್ ಡಿಸ್ಟ್ರಿಕ್ಟ್.

ತಾರೀಖು 31ನೇ ಆಗಸ್ಟ್ 1896.

ಇದರಿಂದ ಸಾಮಸ್ತ ಜನಗಳಿಗೂ ತಿಳಿಯಹಡಿಸುವದೇನಂದರೆ:—

ಸ್ಯ 1896–97ನೇ ಸಾಲಿಗೆ ಮದ್ದಗಿರಿ ತಾಲ್ಲೂಕು ಮತ್ತು ಕೊರ್ಟಗೆರೆ ಸಬ್ ತಾಲ್ಲೂಕಿನಲ್ಲಿ ಇರುವ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿಯೂ ಆಕಾರ ಕಂಡ ಫಡ್ ಜವಿಾನುಗಳಲ್ಲಿಯೂ ಮತ್ತು ಅಮೃತಮಹಲ್ ಕಾವಲ್‌ಗಳಲ್ಲಿಯೂ ದೊರೆಯುವ ಪಸಾರೆ ಜಿನಸುಗಳನ್ನು ಜವಾಯಿಸಿಕೊಳ್ಳುವ ಹಕ್ಕುದಾಯನ್ನ 4—8—96 ಮತ್ತು 5—8—96ನೇ ತಾರೀಖುಗಳಲ್ಲಿ ಹರಾಜು ಮಾಡಿಸಲಾಗಿ ಕಂಸವಾಲ್ ಆದ್ದರಿಂದ ಸದರೀ ಹಕ್ಕುದಾರಿಯನ್ನ ಈ ಕೆಳಗೆ ನಮೂದಾಗುವ ತಾರೀಖು ಮತ್ತು ಸ್ಥಳಗಳಲ್ಲಿ ಪುನಹ ಹರಾಜು ಮಾಡಲ್ಪಡುತ್ತೆ. ಹರಾಜು ಮಧ್ಯಾನ್ಹ 11 ಘಂಟೆಗೆ ಪ್ರಾರಂಭವಾಗುತ್ತೆ, ಹರಾಜು ತುಮಕೂರ್ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ. ಮದ್ದಗಿರಿ ತಾರೀಖು 29—9—96 ಮದ್ದಗಿರಿ, ಕೊರ್ಟಗೆರೆ ತಾರೀಖು 30—9—96 ಕೊರ್ಟಗೆರೆ.

2. ಪ್ರತಿದರಖಾಸ್ತುದಾರನು ಹರಾಜು ಕೈದಾದ ಕೂಡ್ಲೆ ಹರಾಜ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ತೀವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜ್ ಮಂಜೂರ್ಮಾಡಲ್ಪಟ್ಟ ಸಂಗತಿ ಆವಲ್‌ದಾರ್ರಿಂದ ಚಡಸವಾಲ್‌ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 15 ದಿವಸಗಳ ವಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜ್ ಮೊಬಲಗಿಗೆ ರೂಪಾಯಿ 1ಕ್ಕೆ 1 ಆಣೆಯಂತೆ ಲೋಕಲ್‌ಸೆಸ್ಸ್ ವಸೂಲ್ ಮಾಡಲ್ಪಡುವದು.

3. ಕ್ಲಿಪ್ತಕಾಲದ ಳಗೇ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ತೀವಣಾತಿ ಇಟ್ಟ ಮೊಬಲಗು ಸರಕಾರಕ್ಕೆ ಕೀರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ದರಖಾಸ್ತುದಾರನ ಲಕ್ಷಾನಿಗೆ ವಳಪಡಿಸಿ ಪುನಹ ಹರಾಜ್ ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ಮುಂಟಾಗುವ ಫಾಯಿದೆ ಭಾಗ, ದರಖಾಸ್ತುದಾರರು ಹೊಂದಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜವಿಾನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಸಲನ್ನ ರೂಢಿಸಕೂಡದು.

5 ಗಾಮು ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಪಸಾರೆ ಜಿನಸುಗಳಲ್ಲಿ ಅಡಗಿರುವದಿಲ್ಲ.

ಎಂ. ನಾರಾಯಣರಾವ್,
ಡೆಪ್ಯೂಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟ್‌ನಲ್ಲಿ.

ಸ್ಯ 1896—97ನೇ ಇಸವಿ ಅರ್ಜೀ ನಂಬರ್ 15.

ಮೃತಪಟ್ಟ ಕಾಳಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ನರಸುಂಹ್ಮ ಮೈನರ್, ಗಾರ್ಡಿಯರ್ ಜನಕತಂದೆ ಚನ್ನನಾಯಿಕ ವುರಫ್ ಚೆನ್ನಣನವರು, ಮೃತಪಟ್ಟ ಸದರೀ ಕಾಳಪ್ಪನವರಿಗೆ ಮೈನರ್ ದತ್ತುಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಹುಣಸೂರು ತಾಲ್ಲೂಕು ಬೆಟ್ಟದಪುರದ ಸೋಬಳಿ ಚಿನ್ನನಾಯಿಕನ ಕೊಪ್ಪಲ್ ಸ್ಥಳದ ಸದರೀ ಚೆನ್ನನಾಯಿಕ ವುರಫ್ ಚೆನ್ನಣ್ಣನವರು, ಸದರೀ ವಾಸಸ್ಥರಾಗಿ ಮೃತಪಟ್ಟ ಕಾಳಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1860ನೇ ಇಸವಿ 27ನೇ ಆಕ್ಟ್ಯ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚನ್ನನಾಯಿಕ ವುರಫ್ ಚೆನ್ನಣ್ಣನವರ ಅರ್ಜಿಯನ್ನು ಸ್ಯ 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 16ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲವಲ್ಲಿ ಸದರೀ ಮೃತಪಟ್ಟ ಕಾಳಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1896—97ನೇ ಇಸವಿ ಅರ್ಜೀ ನಂಬರ್ 42.

ಮೃತಪಟ್ಟ ಮೈಸೂರು ರಂಗಾಚಾರ್ರವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಶ್ರೀನಿವಾಸಯ್ಯಂಗಾರ್ ಮೈನರ್ ಗಾರ್ಡಿಯರ್ ತಾಯಿ ಶ್ರೀರಂಗಮ್ಮನವರು, ಮೃತಪಟ್ಟ ಸದರೀ ರಂಗಾಚಾರ್ರಿಗೆ ಮಗ, ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಹೊಸಅಗ್ರಹಾರ ಸ್ಥಳದ ಸದರೀ ಶ್ರೀರಂಗಮ್ಮನವರು, ಸದರೀ ವಾಸಸ್ಥರಾಗಿ